# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ" ಯೋಜನೆಯಡಿ ರಾಜ್ಯ ಶೈಕ್ಷಣಿಕ ಕೇಂದ್ರಗಳಾದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರುಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1000 ಸಾಮರ್ಥ್ಯದ ಬಹು ಮಹಡಿ ವಿದ್ಯಾರ್ಥಿನಿಲಯ ಸಮುಚ್ಚಯಗಳನ್ನು ನಿರ್ಮಾಣ ಮಾಡುವ ಕುರಿತು.

**ಓದಲಾಗಿದೆ:-**

1. 2022-23ನೇ ಸಾಲಿನ ಅಯವ್ಯಯ ಭಾಷಣ ಕಂಡಿಕೆ-154
2. ಆರ್ಥಿಕ ಇಲಾಖೆಯ ಅಯವ್ಯಯ ಸೂಚನೆ ಸಂಖ್ಯೆ: ಆಇ 26 ಆಕೋ-2/2022, ದಿನಾಂಕ:01.04.2022
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರ ಅ.ಟಿ ಸಂಖ್ಯೆ: ಲೋಇ/551/ಐಎಫ್ಎ/2022, ದಿನಾಂಕ:11.04.2022 & 06.05.2022.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕಕಡತ ಸಂಖ್ಯೆ:BCWD-15012/2/2022-BCWD-KBCDCS
5. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 16 ಬಿಆರ್ಎಸ್ 2022, ದಿನಾಂಕ: 21.05.2022.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ 2022-23ನೇ ಸಾಲಿನ ಅಯವ್ಯಯ ಭಾಷಣ ಕಂಡಿಕೆ-154 ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ, ಅಲ್ಪಸಂಖ್ಯಾತರ ಮತ್ತು ಇತರೆ ವರ್ಗದ ಮಕ್ಕಳ ಉನ್ನತ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು, ಮೊಟ್ಟ ಮೊದಲ ಬಾರಿಗೆ "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ" ಎಂಬ ಹೊಸ ಯೋಜನೆಯಡಿ ರಾಜ್ಯದ ಶೈಕ್ಷಣಿಕ ಕೇಂದ್ರಗಳಾದ ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಕಲಬುರುಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1000 ಸಾಮರ್ಥ್ಯದ ಬಹು ಮಹಡಿ ವಿದ್ಯಾರ್ಥಿನಿಲಯ ಸಮುಚ್ಚಯಗಳನ್ನು ರೂ.250.00 ಕೋಟಿಗಳ ಮೊತ್ತದಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ಆರ್ಥಿಕ ಇಲಾಖೆಯ ಅಯವ್ಯಯ ಸೂಚನೆಯಲ್ಲಿ ಸದರಿ ಯೋಜನೆಗೆ "ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ" ಬಹುಮಹಡಿಯ ವಿದ್ಯಾರ್ಥಿನಿಲಯ ಸಮುಚ್ಚಯ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಸದರಿ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯು ರೂ.70.00 ಕೋಟಿಗಳನ್ನು ಭರಿಸಲಿದ್ದು, ಉಳಿದ ರೂ.180.00 ಕೋಟಿಗಳನ್ನು ಸಂಬಂಧಪಟ್ಟ ಇಲಾಖೆಗಳು ಕೆಳಕಂಡ ಲೆಕ್ಕಶೀರ್ಷಿಕೆಗಳಡಿ ತೋರಿಸಿರುವ ಮೊತ್ತವನ್ನು ಆಯವ್ಯಯದಲ್ಲಿ ಒದಗಿಸಿರುವ ಅನುದಾನದಿಂದ Deposit Cost Distribution ಮಾದರಿಯಲ್ಲಿ ಲೋಕೋಪಯೋಗಿ ಇಲಾಖೆಗೆ ಒದಗಿಸುವುದು. ಈ ಕೆಳಕಂಡ ಲೆಕ್ಕಶಿರ್ಷಿಕೆಗಳಡಿ ಒದಗಿಸಲಾಗಿರುವ ಅನುದಾನವನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆದು ಯೋಜನೆಯನ್ನು ಅನುಷ್ಠಾನಗೊಳಿತಕ್ಕದ್ದು ಹಾಗೂ ಈ ಯೋಜನೆಗಳಿಗೆ ಪ್ರಸ್ತಾಪಿಸಿದ ಕಾಮಗಾರಿಗಳ ಹೊರತಾಗಿ ಅನುದಾನವನ್ನು ಬೇರೆ ಕಾಮಗಾರಿಗಳಿಗಾಗಿ ವಿನಿಯೋಗಿಸತಕ್ಕದಲ್ಲ ಎಂದು ತಿಳಿಸಲಾಗಿರುತ್ತದೆ.

(ರೂ.ಕೋಟಿಗಳಲ್ಲಿ)

| ಇಲಾಖೆ | ಲೆಕ್ಕಶೀರ್ಷಿಕೆ | ಅನುದಾನ |
|---|---|---|
| ಲೋಕೋಪಯೋಗಿ ಇಲಾಖೆ | 4059-80-051-029-133 | 70.00 |
| ಸಮಾಜ ಕಲ್ಯಾಣ ಇಲಾಖೆ | 4225-01-277-2-03 | 63.00 |
| ಸಮಾಜ ಕಲ್ಯಾಣ ಇಲಾಖೆ | 4225-02-277-2-03 | 27.00 |
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 4225-03-277-2-06 | 54.00 |
| ಅಲ್ಪಸಂಖ್ಯಾತರ ಇಲಾಖೆ | 4225-04-190-0-03 | 36.00 |
| | **ಒಟ್ಟು** | **250.00** |

---2

ಮೇಲೆ ಓದಲಾದ ಕ್ರಮ ಸಂಖ್ಯೆ(3) ರ ಲೋಕೋಪಯೋಗಿ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಒದಗಿಸಲಾಗುವ ರೂ.54.00ಕೋಟಿಗಳ ಅನುದಾನವನ್ನು ಈ ಕೆಳಕಂಡ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಠೇವಣಿ ವಂತಿಕೆ ಖಾತೆಗೆ ಜಮೆ ಮಾಡುವಂತೆ ಕೋರಿರುತ್ತಾರೆ.

(ರೂ.ಕೋಟಿಗಳಲ್ಲಿ)

| ಕ್ರ.ಸಂ | ವಿಭಾಗ | ಕೆ2 ಡಿಡಿಓ ಕೋಡ್ | ಲೆಕ್ಕಶೀರ್ಷಿಕೆ | ಠೇವಣಿ ವಂತಿಕೆ ಖಾತೆ ಸಂಖ್ಯೆ | ಮೊತ್ತ |
|---|---|---|---|---|---|
| 1 | ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ ವಿಭಾಗ, ಧಾರವಾಡ | 219680 | 8443-00-117-008-542 | 01562A001 | 10.80 |
| 2 | ಕಾರ್ಯನಿರ್ವಾಹಕ ಇಂಜಿನಿಯರ್ ಲೋ.ಇ ವಿಭಾಗ, ಬೆಳಗಾವಿ | 218720 | 8443-00-117-0-01-542 | 01555A001 | 10.80 |
| 3 | ಕಾರ್ಯನಿರ್ವಾಹಕ ಇಂಜಿನಿಯರ್ ಲೋ.ಇ ವಿಭಾಗ, ಮಂಗಳೂರು | 217260 | 8443-00-117-0-21-542 | 01575A001 | 10.80 |
| 4 | ಕಾರ್ಯನಿರ್ವಾಹಕ ಇಂಜಿನಿಯರ್ ಲೋ.ಇ ವಿಭಾಗ, ಕಲಬುರುಗಿ | 219180 | 8443-00-117-0-25-542 | 01579A002 | 10.80 |
| 5 | ಕಾರ್ಯನಿರ್ವಾಹಕ ಇಂಜಿನಿಯರ್ ಲೋ.ಇ ವಿಭಾಗ, ಮೈಸೂರು | 217700 | 8443-00-117-0-23-542 | 01577A001 | 10.80 |
| | | | | ಒಟ್ಟು | **54.00** |

ಮೇಲೆ ಓದಲಾದ ಕ್ರಮ ಸಂಖ್ಯೆ(4) ರ ಪ್ರಸ್ತಾವನೆಯಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಲೆಕ್ಕಶೀರ್ಷಿಕೆ 4225-03-277-2-06- ಆಬ್ಜೆಕ್ಟೀವ್ ಕೋಡ್ 422-ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಆಬ್ಜೆಕ್ಟೀವ್ ಕೋಡ್-423-ಗಿರಿಜನ ಉಪಯೋಜನೆಯಡಿ ಒದಗಿಸಿರುವ ಒಟ್ಟು ರೂ.3793.00 ಲಕ್ಷಗಳಲ್ಲಿ ಬಿಡುಗಡೆಗೆ ಬಾಕಿ ಇರುವ 28 ಮುಂದುವರೆದ ಕಾಮಗಾರಿಗಳಿಗೆ ರೂ.2707.00 ಲಕ್ಷಗಳನ್ನು ಹಾಗೂ ಇನ್ನುಳಿದ ರೂ.1086.00 ಲಕ್ಷಗಳನ್ನು 2022-23ನೇ ಸಾಲಿನಲ್ಲಿ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 50 "ಕನಕದಾಸ" ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಅವಶ್ಯಕವಾಗಿರುತ್ತದೆ ಹಾಗೂ ಆಬ್ಜೆಕ್ಟೀವ್ ಕೋಡ್-386-ನಿರ್ಮಾಣದಡಿ ರೂ.6207.00 ಲಕ್ಷಗಳನ್ನು ಒದಗಿಸಲಾಗಿದ್ದು, ಹಿಂದಿನ ಸಾಲುಗಳಲ್ಲಿ ಕಾಮಗಾರಿ ಕೈಗೊಂಡು ಕಾಮಗಾರಿ ಮುಕ್ತಾಯಗೊಂಡಿರುವ/ಕಾಮಗಾರಿ ಮುಕ್ತಾಯ ಹಂತದಲ್ಲಿರುವ ಒಟ್ಟು 136 ಕಟ್ಟಡಗಳ ಬಾಕಿ ಮೊತ್ತ ರೂ.7935.26 ಲಕ್ಷಗಳನ್ನು ನಿರ್ಮಾಣ ಏಜೆನ್ಸಿಗಳಿಗೆ ಪಾವತಿಸಬೇಕಾಗಿದ್ದು, ಒದಗಿಸಿರುವ ರೂ.6207.00 ಲಕ್ಷಗಳನ್ನು ಏಜೆನ್ಸಿಗಳಿಗೆ ಪಾವತಿಸಿದ ನಂತರವೂ ರೂ.1728.26 ಲಕ್ಷಗಳ ಅನುದಾನದ ಕೊರತೆಯುಂಟಾಗುತ್ತದೆ. ಇದಲ್ಲದೇ, 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ 165 ಕೋಟಿ ರೂ.ಗಳ ವೆಚ್ಚದಲ್ಲಿ ಬಾಡಿಗೆ ಕಟ್ಟಡಗಳಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ 50 "ಕನಕದಾಸ"

03/06/22